## ಉಪರಾಷ್ಟ್ರಪತಿಯಿಂದ ದೇಶಪಾಂಡೆ ಸ್ಕಿಲ್ಲಿಂಗ್ ಸೆಂಟರ್ ಉದ್ಘಾಟನೆ

# ಸ್ಟಾರ್ಟ್‌ಅಪ್ ಡೈಲಾಗ್ ಫೆ. 1ರಿಂದ

■ ವಿಜಯವಾಣಿ ಸುದ್ದಿಜಾಲ ಹುಬ್ಬಳ್ಳಿ

ದೇಶಪಾಂಡೆ ಫೌಂಡೇಷನ್ ವತಿಯಿಂದ ಫೆ. 1 ಮತ್ತು 2ರಂದು ಡೆವಲಪ್‌ಮೆಂಟ್ ಡೈಲಾಗ್ ಹಾಗೂ ಸ್ಟಾರ್ಟ್ ಅಪ್ ಡೈಲಾಗ್-2020 ಏರ್ಪಡಿಸಲಾಗಿದೆ ಎಂದು ಸಂಸ್ಥಾಪಕ ಡಾ. ಗುರುರಾಜ ದೇಶಪಾಂಡೆ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜೋಡಣೆ ಉದ್ದೇಶ, ನಾವೀನ್ಯತೆ ಮತ್ತು ಪರಿಣಾಮ' ಪರಿಕಲ್ಪನೆಯೊಂದಿಗೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ತಜ್ಞರು, ಸುಧಾರಕರು, ನೀತಿ ನಿರೂಪಕರು ಭಾಗವಹಿಸಿ ಸಲಹೆ, ಸೂಚನೆ ನೀಡುವರು. ಗಣನೀಯ ಪ್ರಮಾಣದಲ್ಲಿ ಸಾಮಾಜಿಕ ಪರಿಣಾಮ ಸಾಧಿಸಲು ಸಹಕರಿಸುವರು ಎಂದರು. ಅಭಿವೃದ್ಧಿ ಚರ್ಚೆಯ ಸಂದರ್ಭದಲ್ಲಿಯೇ, ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರಿಂದ ದೇಶಪಾಂಡೆ ಸ್ಕಿಲ್ಲಿಂಗ್ ಸೆಂಟರ್ ಉದ್ಘಾಟನೆಯನ್ನೂ ಹಮ್ಮಿಕೊಳ್ಳಲಾಗಿದೆ.

ಫೆ. 1ರಂದು ಬೆಳಗ್ಗೆ 10 ಗಂಟೆಯಿಂದ ನಡೆಯುವ ಕಾರ್ಯಕ್ರಮದಲ್ಲಿ ಕೃಷಿಯ ಸಾಮರ್ಥ್ಯ, ಕೌಶಲ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಬಗೆಗೆ ತಜ್ಞರು ಚರ್ಚಿಸುವರು. ಗೋಕುಲ ರಸ್ತೆಯ ದೇಶಪಾಂಡೆ ಸ್ಕಿಲ್ಲಿಂಗ್ ಸೆಂಟರ್ ಆವರಣದಲ್ಲಿ ಏರ್ಪಡಿಸಿರುವ ಈ ಕಾರ್ಯಕ್ರಮದಲ್ಲಿ 'ಯುವ ಸಮಿತಿ'ಯೂ ಭಾಗವಹಿಸಲಿದೆ. 'ಈವಿಂಗ್ ವಿಥ್ ಲೆಜೆಂಡ್ಸ್' ಕಾರ್ಯಕ್ರಮ ಇನ್ಫೋಸಿಸ್ ಸಭಾಂಗಣದಲ್ಲಿ ಜರುಗಲಿದೆ. ಏರಿಯನ್ ಕೆಪಿಟಲ್ ಅಧ್ಯಕ್ಷ ಮೋಹನದಾಸ್ ಪೈ, ಜಿಎಂಆರ್ ಕಂಪನಿ ಸಂಸ್ಥಾಪಕ ಜಿ.ಎಂ. ರಾವ್ ಅಭಿಪ್ರಾಯಗಳನ್ನು ಹಂಚಿಕೊಳ್ಳುವರು ಎಂದರು.

ಫೆ. 2ರಂದು ಗೋಕುಲ ರಸ್ತೆಯ ದೇಶಪಾಂಡೆ ಸ್ಟಾರ್ಟ್ ಅಪ್ ಕ್ಯಾಂಪಸ್‌ನಲ್ಲಿ 'ದೇಶಪಾಂಡೆ ಸ್ಕಿಲ್ಲಿಂಗ್ ಸೆಂಟರ್'ಅನ್ನು ಲೋಕಾರ್ಪಣೆಗೊಳಿಸಲಾಗುವುದು. ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರು ಕೇಂದ್ರದ ಉದ್ಘಾಟನೆ ನೆರವೇರಿಸುವರು. ನಂತರ ಅದೇ ಸ್ಥಳದಲ್ಲಿ 'ಸ್ಟಾರ್ಟ್ ಅಪ್ ಡೈಲಾಗ್' ನಡೆಯಲಿದೆ ಎಂದು ತಿಳಿಸಿದರು. ದೇಶಪಾಂಡೆ ಫೌಂಡೇಷನ್ ಸಹ ಸಂಸ್ಥಾಪಕಿ ಜಯಶ್ರೀ ದೇಶಪಾಂಡೆ, ಸಿಇಒ ವಿವೇಕ ಪವಾರ್, ಸ್ಟಾರ್ಟ್‌ಅಪ್ ಸಿಇಒ ಸಿ.ಎಂ. ಪಾಟೀಲ, ಸ್ಕಿಲ್ಲಿಂಗ್ ಸೆಂಟರ್ ಸಿಇಒ ಪಿ.ಎನ್. ನಾಯಕ ಇದ್ದರು.



ಹುಬ್ಬಳ್ಳಿಯಲ್ಲಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ದೇಶಪಾಂಡೆ ಫೌಂಡೇಷನ್ ಸಂಸ್ಥಾಪಕ ಡಾ. ಗುರುರಾಜ ದೇಶಪಾಂಡೆ ಮಾತನಾಡಿದರು. ಸಹ ಸಂಸ್ಥಾಪಕಿ ಜಯಶ್ರೀ ದೇಶಪಾಂಡೆ ಇದ್ದರು.

### ಯೋಜನೆ ವಿಸ್ತರಿಸುವ ಉದ್ದೇಶ

ಕೃಷಿ, ಶಿಕ್ಷಣ ಮತ್ತು ಸಣ್ಣ ಉದ್ದಿಮೆಗಳ ಉತ್ತೇಜನಕ್ಕೆ ಹಲವು ಯೋಜನೆಗಳನ್ನು ಈಗಾಗಲೇ ರೂಪಿಸಲಾಗಿದೆ. ಇನ್ನಷ್ಟು ವಿಸ್ತರಿಸುವ ಉದ್ದೇಶವನ್ನು ಹೊಂದಿದ್ದೇವೆ ಎಂದು ದೇಶಪಾಂಡೆ ಫೌಂಡೇಷನ್ ಸಂಸ್ಥಾಪಕ ಡಾ. ಗುರುರಾಜ ದೇಶಪಾಂಡೆ ತಿಳಿಸಿದರು. ಕೃಷಿ ಹೊಂಡ ನಿರ್ಮಾಣದಿಂದ ರೈತರಿಗೆ ಆಗುವ ಲಾಭ, ಅಕ್ಷರ ಕಲಿಕೆಯಿಂದ ಮಕ್ಕಳಲ್ಲಿ ವೃದ್ಧಿಯಾಗುವ ಜ್ಞಾನ, ಮಾರುಕಟ್ಟೆ ವಿಸ್ತರಣೆಗೆ ನೀಡುವ ತರಬೇತಿಯಿಂದ ಸಾಮಾಜಿಕವಾಗಿ ಎಲ್ಲರಿಗೂ ಉಪಯೋಗವಾಗಲಿದೆ ಎಂದರು.